ಕೆಲಸ ಮುಗಿಯಿತು. ಕೋಳಿಗಳು ಅತ್ತ ರವಾನೆಯಾದ ಕೂಡಲೇ ಇತ್ತ ರೈತರ ಅಕೌಂಟುಗಳಿಗೆ ಆನ್‌ಲೈನ್ ಮೂಲಕ ದೊಡ್ಡ ಮೊತ್ತದ ಹಣ ಜಮಾ ಆಗಿಬಿಡುತ್ತದೆ. ಬೇಸಾಯ ಮಾಡಬೇಕಿಲ್ಲ, ಬೀಜ ಬಿತ್ತಬೇಕಿಲ್ಲ, ಕಳೆ ತೆಗೆಯಬೇಕಿಲ್ಲ, ರಾಶಿ ಕಟ್ಟಬೇಕಿಲ್ಲ. ಒಟ್ಟಾರೆ, ಮೈ ಹಣ್ಣಾಗುವ ರೈತೇಕಿ ಕೆಲಸಕ್ಕಿಂತ ಕೋಳಿ ಸಾಕಾಣಿಕೆಯೇ ಬಹಳ ಹಗುರ ಕೆಲಸವೆಂಬುದನ್ನು ಅನುಭವದಿಂದ ಅರಿತ ಬಹಳಷ್ಟು ರೈತರು ನಾ ಮುಂದು-ತಾ ಮುಂದು ಎಂದು ಪೌಲ್ಟ್ರಿ ಉದ್ಯೋಗವನ್ನೇ ತಮ್ಮ ಕುಲಕಸುಬನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಅವರ ನಾಲಿಗೆಗಳೂ ಈಗ ಅನ್ನ-ರೊಟ್ಟಿಗಿಂತ ಬೇರೆಯದೇ ಆದ ರುಚಿಗೆ ನಿಧಾನವಾಗಿ ಒಗ್ಗಿಹೋಗುತ್ತಿವೆ.

ಒಂದೊಂದು ಹಳ್ಳಿಯಿಂದ ಒಂದೊಂದು ದಿನ ನಾಲ್ಕಾರು ಕಂಟೇನರ್ ಲಾರಿಗಳು ಪಂಜರಗಳಲ್ಲಿ ಕೋಳಿಗಳನ್ನು ತುಂಬಿಕೊಂಡು ಬರುತ್ತವೆ. ಪಂಜರಗಳ ಸೈಜ್‌ಗೆ ಅನುಗುಣವಾಗಿ ಒಂದರಲ್ಲಿ ಹತ್ತು, ಇನ್ನೊಂದರಲ್ಲಿ ಹದಿನೈದು, ಮತ್ತೊಂದರಲ್ಲಿ ಇಪ್ಪತ್ತು ಹೀಗೆ ಕೋಳಿಗಳನ್ನು ತುಂಬಲಾಗಿರುತ್ತದೆ. ಲಾರಿಗಳು ಬಂದಕೂಡಲೇ ಆ ಪಂಜರಗಳನ್ನು ಇಳುವಿ, 'ಅಹಿಂಸಾ ಚಿಕನ್ ಸೆಂಟರ್'ನ ಪಕ್ಕದ ಶೆಡ್‌ನಲ್ಲಿ, ಒಂದರ ಮೇಲೊಂದರಂತೆ ಪೇರಿಸಿಡುತ್ತಾರೆ. ಅಲ್ಲಿಯ ವರಗೆ ಪೌಲ್ಟ್ರಿಯ ಅಗಲವಾದ ಪ್ರದೇಶದಲ್ಲಿ ಹಾಯಾಗಿ ತಿನ್ನುತ್ತ, ಓಡಾಡುತ್ತ ಬೆಳೆದ ಕೋಳಿಗಳು ಪಂಜರದೊಳಗೆ ಬಂಧಿಯಾದ ಕೂಡಲೇ ಜೀವಭಯದಿಂದ ಕೊರ್ ಕೊರ್ ಸದ್ದು ಮಾಡತೊಡಗುತ್ತವೆ. ಅದು ಕೆಲಹೊತ್ತು ಮಾತ್ರ. ಪ್ರಯಾಣ ಮುಗಿಯುವಷ್ಟರಲ್ಲಿ ಆ ಮತ್ತೊಂದು ಲೋಕಕ್ಕೂ ಒಗ್ಗಿಹೋಗುವ ಕಾರಣಕ್ಕೆ ಅವೆಲ್ಲ ಸ್ವಲ್ಪ ಹೊತ್ತಲ್ಲೇ ನಿಧಾನವಾಗಿ ಮೌನಕ್ಕೆ ಜಾರಿಬಿಟ್ಟಿರುತ್ತವೆ. ಪಂಜರಗಳನ್ನು ಇಳಿಸುವಾಗ ಜೀವಭಯದಿಂದ ಅವು ಒಂದಿಷ್ಟು ಕಿಚಾಯಿಸಿದರೂ, ಸ್ವಲ್ಪವೇ ಹೊತ್ತಿನಲ್ಲಿ ಮತ್ತೆ ಶಾಂತವಾಗಿಬಿಡುತ್ತವೆ. ಅವೆಲ್ಲ ಆಗಾಗ ಗದ್ದಲ ಎಬ್ಬಿಸುವುದು ಬಹಳ ಹೊತ್ತಿನಿಂದ ಆಹಾರ ಸಿಗದ ಕಾರಣಕ್ಕೆ ಮಾತ್ರ. ಕೊಲ್ಲಲೆಂದೇ ಒಯ್ಯುವ ಕೋಳಿಗಳ ಹೊಟ್ಟೆಗೆ ಆಹಾರ ಕೊಟ್ಟಾದರೂ ಏನು ಪ್ರಯೋಜನ ಎಂಬುದು ಧರ್ಮಪ್ರಸಾದನ ತರ್ಕ! ಅಷ್ಟಕ್ಕೂ ಅವುಗಳ ಹಸಿವನ್ನು ಕೇಳುವವರಾದರೂ ಇನ್ನಾರು? ಕೋಳಿಗಳ ಹಸಿವನ್ನು ಹೆಚ್ಚಿಸಿ, ಅಂಥ ಹಸಿವಿನಿಂದಲೇ ಕೂಡಿದ ಅವುಗಳನ್ನು ಕೊಂದು, ಆ ಮಾಂಸವನ್ನೇ ಮಾರುತ್ತಾನೆ ಧರ್ಮಪ್ರಸಾದ್. ಅಂಥ ಹಸಿವುಯುಕ್ತ ಮಾಂಸ ತಿಂದು ತಮ್ಮ ಹಸಿವನ್ನು ಹಿಂಗಿಸಿಕೊಳ್ಳುತ್ತಾರೆ ಅಲ್ಲಿ ಮಾಂಸ ಕೊಳ್ಳುವ ಮನುಷ್ಯರು. ಈ ಕಾರಣಕ್ಕಾಗಿಯೇ ಮನುಷ್ಯರ ಹಸಿವು ಎಂದಿಗೂ ಹಿಂಗುವುದೇ ಇಲ್ಲವೆಂದು ಕೋಳಿಗಳು ತಮ್ಮ ಹೊಟ್ಟೆಯೊಳಗಿನ ಸಂಕಟವನ್ನು ಕಿಚಾಯಿಸುವುದರ ಮೂಲಕ ಆಗಾಗ ಹೊರಹಾಕುತ್ತವೆ. ಹೀಗೆ ಹಸಿವನ್ನೇ ತನ್ನ ವ್ಯವಹಾರದ ಮೂಲವನ್ನಾಗಿಸಿಕೊಂಡ ಧರ್ಮಪ್ರಸಾದನ ಹಸಿವೋ, ಅದು ಮತ್ತೊಂದು ಬಗೆಯದೆ. ಇರಲಿ, ಅದರ ಬಗ್ಗೆ ಮಾತಾಡದಿರುವುದೇ ಒಳಿತು.

ಹಿಂದೆ ಹೇಳಿದಂತೆ ಕಂಟೇನರ್ ಲಾರಿಗಳಲ್ಲಿ ವಿಕಾಸಪುರಕ್ಕೆ ಬರುವ ಹೊತ್ತಿಗೆ ಸಾಮಾನ್ಯವಾಗಿ ಮೌನಕ್ಕೆ ಜಾರಿಬಿಡುತ್ತಿದ್ದ ಕೋಳಿಗಳು ಇಂದು ಅದೇಕೋ ಮೊದಲಿನ ಹಾಗಿರಲಿಲ್ಲ! ಪಂಜರದೊಳಗೆ ಒತ್ತೊತ್ತಿ ತುಂಬಲಾಗಿದ್ದ ಅವೆಲ್ಲ ಇದ್ದಕ್ಕಿದ್ದಂತೆ ಒಮ್ಮೆಲೇ ಜೋರಾಗಿ ಕೊಕ್ ಕೊಕ್, ಕೊಕ್ ಅಂತ ತಮ್ಮ ತಮ್ಮಲ್ಲೇ ಕಿಚಾಯಿಸಿಕೊಳ್ಳತೊಡಗಿದವು!. 'ಅಹಿಂಸಾ ಚಿಕನ್ ಸೆಂಟರ್'ಗೆ ತಲುಪುವ ಹೊತ್ತಿಗೆ ಲಾರಿಯ ಡ್ರೈವರ್ ಮತ್ತು ಕಿನ್ನರನ ಕಿವಿಗಳು ಗಡಿಚಿಕ್ಕುವಂತೆ ಅವುಗಳ ಒದರಾಟ ಮುಗಿಲು ಮುಟ್ಟಿತ್ತು. ಸಾವಿರಾರು ಕೋಳಿಗಳು ಒಮ್ಮಲೇ ಹಾಗೆ ಬಿಟ್ಟೂಬಿಡದೆ ಗೊಗ್ಗರು ದನಿಯಲ್ಲಿ ಒದರಾಡತೊಡಗಿದರೆ ಇನ್ನೇನಾದೀತು? ಪಂಜರಗಳನ್ನು ಇಳಿಸುವಾಗಲೂ ಆ ಗದ್ದಲ ಮುಂದುವರಿದೇ ಇತ್ತು. ಇಂಥ ವಿಚಿತ್ರ ಘಟನೆ ನಡೆಯುತ್ತಿದ್ದ ಹೊತ್ತಲ್ಲೇ ಧರ್ಮಪ್ರಸಾದ್ ಆಕಸ್ಮಿಕವಾಗಿ ಚಿಕನ್ ಸೆಂಟರ್‌ಗೆ ಬಂದಿದ್ದ. ಕೋಳಿಗಳು ಅನಿರೀಕ್ಷಿತವಾಗಿ ಆ ರೀತಿ ಕಿಚಾಯಿಸುವುದನ್ನು ಕೇಳಿದ ಆತನಿಗೆ ಅಚ್ಚರಿಯೋ ಅಚ್ಚರಿ! ಅದನ್ನೆಲ್ಲ ದಂಗುಬಡಿದು ನೋಡುತ್ತಿದ್ದ ನೌಕರರನ್ನು ಗಮನಿಸಿದ ಆತ ಇದರಲ್ಲೇನೋ ಗಮ್ಮತ್ತಿದೆ ಎಂದು ಯೋಚಿಸಿ, 'ಏ ಇದೆಲ್ಲ ಮಾಮೂಲು ಹೋಗ್ರೋ, ಸ್ವಲ್ಪ ಹೊತ್ತು ಹಾಗೆ ಕಿರಿಚಾಡಿ ಸುಸ್ತಾಗಿ, ನಂತರ ಅವು ತಾವೇ ತಾವಾಗಿ ಸುಮ್ಮನಾಗುತ್ತವೆ, ಅದ್ನೇನ್ ನೋಡ್ತೀರಿ, ನಿಮ್ಮ ಕೆಲ್ಸಾ ಮಾಡ್ಹೋಗ್ರಿ...' ಎಂದು ಏರುದನಿಯಲ್ಲೇ ಜಬರಿಸಿದ. ಹೆದರಿದ ಕೆಲಸಗಾರರು ಮೌನಧರಿಸಿ ತಮ್ಮ ತಮ್ಮ ಕೆಲಸಕ್ಕೆ ಮರಳಿಬಿಟ್ಟರು.